ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ
UNIVERSITY OF AGRICULTURAL AND HORTICULTURAL SCIENCES, SHIVAMOGGA

ಕ್ರ.ಸಂಖ್ಯೆ: ಕೃ.ತೋ.ವಿ.ವಿ.(ಶಿ)/ಕು.ಸ/ಡಿಪ್ಲೊಮ ಪ್ರವೇಶ/ 1295 /2018-19 ದಿನಾಂಕ: 23-07-2018

## ಅಧಿಸೂಚನೆ

### ಕೃಷಿ ಪರಿಕರಗಳ ವಿತರಣಾ ಸೇವೆ ಡಿಪ್ಲೊಮಾ (DAESI) ಗೆ ಪ್ರವೇಶ ಪ್ರಕಟಣೆ

ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ, ಶೈಕ್ಷಣಿಕ ವರ್ಷ 2018-19 ನೇ ಸಾಲಿನಲ್ಲಿ ಒಂದು ವರ್ಷದ ಕೃಷಿ ಪರಿಕರಗಳ ವಿತರಣಾ ಸೇವೆ ಡಿಪ್ಲೊಮಾ ಕೋರ್ಸ್‌ಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| | |
|---|---|
| ಒಟ್ಟು ಸೀಟುಗಳು | 50 |
| ಶೈಕ್ಷಣಿಕ ವಿದ್ಯಾರ್ಹತೆ | ಎಸ್.ಎಸ್.ಎಲ್.ಸಿ/ 10ನೇ ತರಗತಿ ಅಥವಾ ತತ್ಸಮಾನ ಪರಿಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು |
| ಕೋರ್ಸ್ ಶುಲ್ಕ | ಮೊದಲನೆ ಸೆಮಿಸ್ಟರ್ ರೂ. 10,000/-, ಎರಡನೆ ಸೆಮಿಸ್ಟರ್ ರೂ. 10,000/- |

2018-19ನೇ ಸಾಲಿನ ಡಿಪ್ಲೊಮಾ ಕೋರ್ಸ್‌ಗೆ ಪ್ರವೇಶಾತಿಗಾಗಿ ಸಂಗತಿಗಳ ಹಾಗೂ ದಿನಾಂಕಗಳ ವಿವರ

| ಸಂಗತಿ | ದಿನಾಂಕ |
|---|---|
| ಅರ್ಜಿ ಪಡೆಯಲು ಪ್ರಾರಂಭದ ದಿನಾಂಕ | 23-07-2018 |
| ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಅರ್ಹತಾಪಟ್ಟಿಯನ್ನು ಪ್ರಕಟಿಸುವ ದಿನಾಂಕ | 04-09-2018 |
| ಕೌನ್ಸಿಲಿಂಗ್ ಮತ್ತು ಪ್ರವೇಶಾತಿಗೆ ನೋಂದಣಿ ಮಾಡಿಕೊಳ್ಳುವ ಸಮಯ ಮತ್ತು ದಿನಾಂಕ | ಬೆಳಗ್ಗೆ 09 ರಿಂದ 11-00 ಗಂಟೆ 18-09-2018 |
| ನೋಂದಣಿಗೆ ಕಡೆಯ ದಿನಾಂಕ (ಸೆಮಿಸ್ಟರ್ ಪ್ರಾರಂಭ ) | 26-09-2018 |

**ಸೂಚನೆಗಳು**

ಪ್ರವೇಶಾತಿ ಅಧಿಸೂಚನೆ, ವಿವರಣಾ ಪುಸ್ತಕ ಮತ್ತು ಅರ್ಜಿ ನಮೂನೆಗಳು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ **www.uahs.in** ಮತ್ತು **www.uahs.edu.in** ಲಭ್ಯವಿರುತ್ತವೆ. ಅರ್ಜಿದಾರರು ವಿಶ್ವವಿದ್ಯಾಲಯದ ವೆಬ್‌ಸೈಟ್ ಮೂಲಕ ಅರ್ಜಿ ನಮೂನೆಯನ್ನು ಪಡೆದುಕೊಂಡು, ದಿನಾಂಕ 23-07-2018 ರಿಂದ 21-08-2018 ರೊಳಗೆ ರಾಷ್ಟ್ರೀಕೃತ ಬ್ಯಾಂಕುಗಳಿಂದ ರೂ.200/- (ಎಸ್ಸಿ/ಎಸ್ಟಿ/ಪ್ರವರ್ಗ-1 ರೂ.100/-)ರ ಡಿಮ್ಯಾಂಡ್ ಡ್ರಾಫ್ಟನ್ನು (ಈ ಹೆಸರಿಗೆ **The Comptroller, UAHS, Shivamogga payable at Shivamogga**) ಪಡೆದು ಅರ್ಜಿಯೊಂದಿಗೆ ಸಲ್ಲಿಸಬೇಕು.

ಅಭ್ಯರ್ಥಿಯು ಭರ್ತಿಮಾಡಿದ ಅರ್ಜಿಯ ಜೊತೆಗೆ ಮೂಲ ಡಿಮ್ಯಾಂಡ್ ಡ್ರಾಫ್ಟನ್ನು (Original DD) ಮತ್ತು ಎಲ್ಲಾ ಸಂಬಂಧಿತ ದಾಖಲೆಗಳ (ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ, ಜಾತಿ ಪ್ರಮಾಣಪತ್ರ, ವರಮಾನ ಪ್ರಮಾಣಪತ್ರ, ಗ್ರಾಮೀಣ ಅಭ್ಯರ್ಥಿ ಪ್ರಮಾಣಪತ್ರ, ಕನ್ನಡ ಮಾಧ್ಯಮ ಮತ್ತು ಹೈದ್ರಾಬಾದ್-ಕರ್ನಾಟಕ ಪ್ರದೇಶದ ಪ್ರಮಾಣಪತ್ರ ಮುಂತಾದವು) ನಕಲು ಪ್ರತಿಗಳನ್ನು ದಿನಾಂಕ **21-08-2018** (5-00 ಗಂಟೆಯೊಳಗೆ) ಅಥವಾ ಅದಕ್ಕಿಂತ ಮುಂಚಿತವಾಗಿ ನಿಗದಿಪಡಿಸಲಾದ ನಮೂನೆಗಳಲ್ಲಿ **ಕುಲಸಚಿವರು, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ನವಿಲೆ, ಶಿವಮೊಗ್ಗ-577204** ಇವರಿಗೆ ಖುದ್ದಾಗಿ ಅಥವಾ ಅಂಚೆಯ ಮೂಲಕ ಸಲ್ಲಿಸಬಹುದು. ಕೊನೆಯ ದಿನಾಂಕದ ನಂತರ ಪಡೆದ ಅರ್ಜಿಗಳನ್ನು ಮತ್ತು ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಅರ್ಹ ಅಭ್ಯರ್ಥಿಗಳು ರೂ. 10,000/- ನಗದು ಅಥವಾ ಮೂಲ ಡಿಮ್ಯಾಂಡ್ ಡ್ರಾಫ್ಟ್ (Original DD) (The Comptroller, UAHS, Shivamogga, payable at Shivamogga ಇವರ ಹೆಸರಿನಲ್ಲಿ) ಮತ್ತು ಎಲ್ಲಾ ಮೂಲ ಅಂಕಪಟ್ಟಿ/ ದಾಖಲೆಗಳನ್ನು (all original documents) ಹಾಗೂ ಎರಡು ಸೆಟ್ ನಕಲು ಪ್ರತಿಗಳೊಂದಿಗೆ ಅರ್ಹ ಅಭ್ಯರ್ಥಿಗಳು ಕೌನ್ಸಿಲಿಂಗ್ ಮತ್ತು ಪ್ರವೇಶಾತಿಗೆ ಖುದ್ದಾಗಿ ಶಿಕ್ಷಣ ನಿರ್ದೇಶಕರ ಕಛೇರಿ, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ ಇಲ್ಲಿಗೆ 18-09-2018ರಂದು ಹಾಜರಿರತಕ್ಕದ್ದು. ಪ್ರವೇಶಾತಿ ಬಯಸುವ ಎಲ್ಲಾ ಅರ್ಹ ಅಭ್ಯರ್ಥಿಗಳು ದಿನಾಂಕ 18-09-2018ರ ಬೆಳಗ್ಗೆ 09-00ರಿಂದ 11-00 ಗಂಟೆಯೊಳಗೆ ನೋಂದಾಯಿಸತಕ್ಕದ್ದು. ಇಲ್ಲವಾದಲ್ಲಿ, ಅರ್ಹತೆ ಹೊಂದಿರುವ ಇತರೆ ಅಭ್ಯರ್ಥಿಗಳಿಗೆ ಪ್ರವೇಶ ಕಲ್ಪಿಸಿಕೊಡಲಾಗುವುದು. ಹೆಚ್ಚಿನ ವಿವರಗಳಿಗೆ ಹಾಗೂ ಕಾಲಕಾಲಕ್ಕೆ ವಿಶ್ವವಿದ್ಯಾಲಯ ನೀಡುವ ಸೂಚನೆಗಳಿಗಾಗಿ ವಿಶ್ವವಿದ್ಯಾಲಯದ ವೆಬ್ ಸೈಟ್ ವೀಕ್ಷಿಸಬಹುದಾಗಿದೆ.

ಸೂಚನೆ: ಅರ್ಜಿ ಸಲ್ಲಿಸುವ ಮೊದಲು ಅಭ್ಯರ್ಥಿಗಳು ವಿವರಣಾ ಪುಸ್ತಕವನ್ನು ಎಚ್ಚರಿಕೆಯಿಂದ ಓದಬೇಕು.

ಆದೇಶದ ಮೇರೆಗೆ

ಕುಲಸಚಿವರು
(ಡಾ. ಪ. ನಾರಾಯಣಸ್ವಾಮಿ)
ಕುಲಸಚಿವರು
ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ-577 204